
ಕಾಯುತ್ತಿದ್ದರು. ಅನೇಕ ಕವಿಗಳು ಆಗಲೇ ಬಂದು ತಲುಪಿದ್ದರು. ಅಡಿಗರು ಸ್ವತಃ ಆಸಕ್ತಿ ವಹಿಸಿ ಎಲ್ಲರನ್ನೂ ಮಾತಾಡಿಸುತ್ತಿದ್ದರು. ಅಲ್ಲಿ ಕೆ.ಎಸ್. ನರಸಿಂಹಸ್ವಾಮಿ, ಕ.ವೆಂ. ರಾಜಗೋಪಾಲ, ಟಿ.ಜಿ. ರಾಘವ, ಜಿ.ಎಸ್. ಸಿದ್ಧಲಿಂಗಯ್ಯ, ವೀ. ಚಿಕ್ಕವೀರಯ್ಯ ಮುಂತಾದವರು ಸೇರಿದ್ದರು. ನನಗೆ ಮುನ್ನುಡಿ ಬರೆದು ಕೊಟ್ಟಿದ್ದ ಕೆ.ಎಸ್.ನ. ಅವರನ್ನು ನಾನು ಮುಖತಃ ನೋಡಿದ್ದು ಅಲ್ಲಿಯೇ. ಪತ್ರವ್ಯವಹಾರದ ಮುಖಾಂತರವೇ ನಮ್ಮ ಪರಿಚಯವಾಗಿತ್ತು. ನನ್ನ ಹಸ್ತಪ್ರತಿ ಓದಿ, ಮುನ್ನುಡಿ ಬರೆದಿದ್ದರು. ಸಾಗರದಲ್ಲಿ ನನ್ನನ್ನು ಕಂಡು ಅವರಿಗೂ ಸಂತೋಷವಾಯಿತು. ಅಂದು ಸಂಜೆ ನಡೆದ ಕವಿಗೋಷ್ಠಿಗೆ ಸಾಗರ ಪುರವೇ ಬಂದು ಸೇರಿತ್ತು. ಮಹಾಬಲೇಶ್ವರ ಭಟ್ ಮತ್ತು ಅಡಿಗರ ಪ್ರಾಸ್ತಾವಿಕ ಮಾತುಗಳ ನಂತರ, ನಾವು ಬರೆದ ನಮ್ಮ ಇಷ್ಟದ 2-3 ಕವಿತೆಗಳನ್ನು ಓದಿದೆವು. ಕವಿತೆಗಳನ್ನು ಆಸ್ವಾದಿಸುವ ಆಸಕ್ತಿಯನ್ನು ಗೋಷ್ಠಿ ಹುಟ್ಟಿಸಿತ್ತು.

* * *

ನಾಡಿಗ ಮೇಲಿಂದ ಮೇಲೆ ನಮ್ಮ ಮನೆಗೆ ಬರುತ್ತಿದ್ದ. ನಸುಕಿನಲ್ಲಿ ಧಾರವಾಡ ತಲುಪಿ, 5-6 ಗಂಟೆಯ ಒಳಗಾಗಿ ನೇರವಾಗಿ ನಮ್ಮ ಮನೆಗೆ ಬರುತ್ತಿದ್ದ. ಅವ್ವ ಅಷ್ಟೊತ್ತಿಗಾಗಲೇ ಎದ್ದಿರುತ್ತಿದ್ದಳು. ಮೊದಲಿನಿಂದಲೂ ನಾನು ಏಳುವುದು ಸ್ವಲ್ಪ ನಿಧಾನ. ನಾಡಿಗ ಅವ್ವ ಕೊಟ್ಟ ಚಹಾ ಕುಡಿದು, ಹೊದ್ದುಕೊಂಡು ಮಲಗಿರುತ್ತಿದ್ದ. ತಡವಾಗಿ ಎದ್ದ ನಾನು, 'ಯಾರು ಮಲಗಿದ್ದಾರೆ', ಎಂದು ಕೇಳಿದರೆ, ಅವ್ವ, 'ದೆವ್ವ ಬಂದೈತಿ' ಅಂತಿದ್ದಳು. 'ರಾತ್ರಿ/ಕತ್ತಲಲ್ಲಿ/ತಿಳಿತಿಳಿದಾಗ ಬರುವವರು ದೆವ್ವ ಅಲ್ಲವೇ' ಎನ್ನುತ್ತಿದ್ದಳು. ಅವಳಿಗೆ 'ಸುಮತೀಂದ್ರ' ಅನ್ನಲು ಬರುತ್ತಿರಲಿಲ್ಲ. ನಾನು ಅಂದಂತೆ 'ಸುಮತಿ' ಅನ್ನಲು ಮನಸ್ಸು ಮಾಡುತ್ತಿರಲಿಲ್ಲ. ನಾಡಿಗನಿಗೂ ಅವ್ವನ 'ದೆವ್ವ' ನಾಮಕರಣ ಇಷ್ಟವಾಗಿತ್ತು. ಅದನ್ನು ಕೇಳಿ, ಮನಸಾರೆ ನಕ್ಕುಬಿಡುತ್ತಿದ್ದ. ಎದ್ದು ಮಾತಾಡುತ್ತಲೇ ಅವ್ವನ ಆರೋಗ್ಯ ವಿಚಾರಿಸುತ್ತ, ಅವಳ ಜೊತೆ ಅಡುಗೆಮನೆಯಲ್ಲಿ ಕುಳಿತು, ಮತ್ತೆ ಬಿಸಿ ಚಾ ಮಾಡಿಸಿಕೊಳ್ಳುತ್ತಿದ್ದ. ನಂತರ ನಮ್ಮೊಡನೆ ತಿಂಡಿ ಇತ್ಯಾದಿ. ಅಂಥ ಒಂದು ಸಂದರ್ಭದಲ್ಲಿಯೇ ಅವನು ನನ್ನನ್ನು ಏಕವಚನದಲ್ಲಿ 'ತಮ್ಮ' ಎಂದು ಕರೆಯತೊಡಗಿದ್ದ. ನಾನು ಅವನಿಗೆ 'ನಾಡಿಗ' ಬದಲು 'ಸುಮತಿ' ಎನ್ನುತ್ತಿದ್ದೆ. ತಾನು ಬರೆಯುತ್ತಿದ್ದ ಪತ್ರಗಳಲ್ಲಿಯೂ ಅವನು. 'ತಮ್ಮ' ಎಂದೇ ಸಂಬೋಧಿಸುತ್ತಿದ್ದ, 'ಸುಮತಿ' ಎಂದು ಸಹಿ ಮಾಡುತ್ತಿದ್ದ.

* * *

'ಸಂಕ್ರಮಣ'ಕ್ಕೆ ಈಗಾಗಲೇ ಸಾಕಷ್ಟು ಕವಿತೆ, ಲೇಖನ ಬರತೊಡಗಿದ್ದುವು. ಲೇಖನ ಕಳಿಸುವವರು ತಮ್ಮ ವಿಳಾಸ ಕೊಡಲೇಬೇಕಿತ್ತು. ಹೊಸ ಬಗೆಯ ಒಂದು ಕವಿತೆ ನಮಗೆ ಇಷ್ಟವಾಗಿದ್ದರೂ, ವಿಳಾಸ ಇಲ್ಲದ್ದರಿಂದ



ಒಂದು ಬದಿಗೆ ಇಟ್ಟಿರುತ್ತಿದ್ದೆ. ನಾಡಿಗನಿಗೆ ನಮ್ಮ ಮನೆಯಲ್ಲಿ ಪೂರ್ಣ ಸ್ವಾತಂತ್ರ್ಯವಿತ್ತು. ನನ್ನ ಟೇಬಲ್ ಮೇಲೆ ಇಟ್ಟಿದ್ದ ಎಲ್ಲ ಪತ್ರ, ಲೇಖನ ಅನಾಯಾಸ ಎತ್ತಿ ಓದುತ್ತಿದ್ದ. ಹಾಗೆ ಒಂದು ಬದಿಯಲ್ಲಿ ಇಟ್ಟಿದ್ದ ಒಂದು ಕವಿತೆಯನ್ನು ಒಮ್ಮೆ ಓದಿ ನೋಡಿದ. 'ಲ್ಯಾಂಬರ್ಟಾ ಮತ್ತು ವೆಸ್ಪಾ ಹತ್ತಿ' ಹೀಗೆಲ್ಲ ಇದ್ದ ಕವಿತೆ. 'ಲ್ಯಾಂಬ್ರೆಟಾ' ಬದಲು 'ಲ್ಯಾಂಬರ್ಟಾ' ಎಂದಿತ್ತು. ಕವಿತೆ ಕಳಿಸಿದವರ